**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಸ್ಪೇಷಲ್ ಕೇಸ್ ನಂ.256/2019**

ಪ್ರಾ.ಸಾ. 1

ಚಾ.ಸಾ. 1

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 20.11.2024**

| | |
|---|---|
| ಸಾಕ್ಷಿದಾರರ ಹೆಸರು | ಪುಟ್ಟಮಾದಯ್ಯ |
| ತಂದೆಯ ಹೆಸರು | ಕಾಳಯ್ಯ |
| ವಯಸ್ಸು | 65 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ | 6 ನೇ ಕ್ರಾಸ್, ಗಾಂಧಿನಗರ, ಮಂಡ್ಯ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ಚಾಸಾ.2 ನನ್ನ ಮಗ. ಚಾಸಾ.3 ನನ್ನ ಮಗಳು. ಚಾಸಾ.4 ನನ್ನ ಹೆಂಡತಿ. ಚಾಸಾ.5 ನನ್ನ ತಂಗಿ, ಚಾಸಾ.6 ನನ್ನ ಅತ್ತಿಗೆ, ಚಾಸಾ.7 ನನ್ನ ಅತ್ತೆ. ನಾವು ಪರಿಶಿಷ್ಟ ಜಾತಿಗೆ ಸೇರಿದವರು. ಚಾಸಾ.8 ರಿಂದ 13 ರವರು ಗೊತ್ತು. ಆರೋಪಿತರು ಗೊತ್ತು. ಅವರು ಹುಲ್ಕೆರೆ ಗ್ರಾಮದವರು, ಅವರು ಒಕ್ಕಲಿಗರು. ನಾನು ನನ್ನ ತಾತನ ಕಾಲದಿಂದಲೂ ಗಾಂಧಿನಗರ, 6 ನೇ ಕ್ರಾಸ್ ನಲ್ಲಿ ಷೆಡ್ ಹಾಕಿಕೊಂಡು ವಾಸ ಇದ್ದೇನೆ. ನನ್ನ ಜಾಗಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ.

2. ದಿನಾಂಕ 30.08.2019 ರಂದು ನನ್ನ ಷೆಡ್ ನ ಹತ್ತಿರ ಸುಮಾರು 12 ಜನ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದು ಹೊಲೆಯ ನನ್ನ ಮಗನೇ ಇವನನ್ನು

ಬಿಡಬೇಡಿ ಈ ಸೈಟು ನಮಗೆ ಸೇರಿದ್ದು ಇದನ್ನು ನಾನು ಖಾತೆ ಮಾಡಿಸಿಕೊಂಡಿದ್ದೇನೆ, ನಿಮ್ಮನ್ನು, ನಿಮ್ಮ ಕುಟುಂಬದವರನ್ನು ಸಾಯಿಸದೇ ಬಿಡುವುದಿಲ್ಲ ಎಂದು ಬೈದು ಬೆದರಿಕೆ ಹಾಕಿದರು. ಷೆಡ್ ನಲ್ಲಿ ನಾನು, ಚಾಸಾ.2 ರಿಂದ 7 ರವರುಗಳು ಇದ್ದಾಗ ಆರೋಪಿತರು ನನ್ನನ್ನು ಕೆಳಗೆ ತಳ್ಳಿ, ಕಾಲಿನಿಂದ ಒದ್ದರು. ನನ್ನನ್ನು ಬಿಡಿಸಲು ಬಂದ ನನ್ನ ಮಗಳು ಚಾಸಾ.3 ರವರಿಗೆ ಹೊಡೆದರು. ಷೆಡ್ ಅನ್ನು ಕಿತ್ತು ಹಾಕಿ ಹೊಸದಾಗಿ ಮನೆ ಕಟ್ಟುತ್ತಿದ್ದೆವು, ಆರೋಪಿತರು ಕಟ್ಟಿದ ಮನೆಯನ್ನು ಹಾರೆಯಿಂದ ಉರುಳಿಸಿ ಹಾಕಿದರು. ಗಲಾಟೆಯಲ್ಲಿ ನನಗೆ, ನನ್ನ ಮನೆಯವರಿಗೆ ಪೆಟ್ಟು ಆಗಿದ್ದು ಮಂಡ್ಯ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

3. ಈ ಕುರಿತು ನಾನು ಠಾಣೆಗೆ ಹೋಗಿ ದೂರು ಕೊಟ್ಟಿದ್ದು, ಅದನ್ನು ನಿಪಿ.1 ಎಂದು ಗುರುತಿಸಲಾಗಿದ್ದು ಸಾಕ್ಷಿ ಹೆಬ್ಬೆಟ್ಟು ಗುರುತನ್ನು ಗುರುತಿಸಿರುತ್ತಾರೆ.

4. ದೂರು ಕೊಟ್ಟ ನಂತರ ಪೊಲೀಸರು ಪಂಚರ ಸಮಕ್ಷಮ ನನ್ನ ಮನೆಯ ಹತ್ತಿರ ಮಹಜರ್ ಮಾಡಿ ಸ್ಥಳದಿಂದ ಒಂದು ರೀಪರ್ ಪಟ್ಟಿ , ಹೊಸ ಸಿಮೆಂಟ್ ಇಟ್ಟಿಗೆ ಚೂರು, ಎರಡು ಹಳೆ ಸಿಮೆಂಟ್ ಇಟ್ಟಿಗೆ ಚೂರು, ಸಿಮೆಂಟ್ ಮಿಶ್ರಿತ ಡಸ್ಟ್ ಇವುಗಳನ್ನು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡು ಅದಕ್ಕೆ ನನ್ನ ಹೆಬ್ಬೆಟ್ಟು ಗುರುತು ಪಡೆದುಕೊಂಡರು. ಸ್ಥಳ ಮಹಜರ್ ನೋಡುತ್ತಿದ್ದು ಅದನ್ನು ನಿಪಿ.2 ಎಂದು ಗುರುತಿಸಲಾಗಿದೆ. ಸಾಕ್ಷಿ ಹೆಬ್ಬೆಟ್ಟು ಗುರುತನ್ನು ಗುರುತಿಸಿರುತ್ತಾರೆ. ಮೂರು ಪೊಟೋಗಳನ್ನು ಒಟ್ಟಾರೆ ನಿಪಿ.3 ಎಂದು ಗುರುತಿಸಲಾಗಿದೆ.

5. ಜಪ್ತಾದ ಮು.ಮಾ. ಗಳನ್ನು ನೋಡಿದರೆ ಗುರುತಿಸುತ್ತೇನೆ. ರೀಪರ್ ಪಟ್ಟಿ ಮು.ಮಾ.1, ಹೊಸ ಸಿಮೆಂಟ್ ಇಟ್ಟಿಗೆ ಚೂರು ಮು.ಮಾ.2, ಎರಡು ಹಳೆ ಸಿಮೆಂಟ್ ಇಟ್ಟಿಗೆ ಚೂರು ಮು.ಮಾ.3, ಸಿಮೆಂಟ್ ಮಿಶ್ರಿತ ಡಸ್ಟ್ ಮು.ಮಾ.4 ಎಂದು ಗುರುತಿಸಲಾಗಿದೆ.

6. ಗಲಾಟೆ ಮಾಡಿದಂತಹ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸ್ವಲ್ಪ ದಿನದ ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಆರೋಪಿತರನ್ನು ತೋರಿಸಿ ಗುರುತಿನ ಬಗ್ಗೆ ನನ್ನ ಹೇಳಿಕೆ ಪಡೆದುಕೊಂಡರು.

7. ನನ್ನ ಮನೆಯ ಹೊಡೆದು ಹಾಕಿದ್ದರಿಂದ ಸುಮಾರು ರೂ.80,000/- ಹಣ ನಷ್ಟ ಉಂಟು ಹಾಕಿರುತ್ತದೆ.

(ಆರೋಪಿತರು ಗೈರು ಹಾಜರಾಗಿರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಿ ಮುಂದೂಡಲಾಗಿದೆ.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.